# ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಅಫಜಲಪೂರ .

# ಸಿಸಿ ನಂ.2976/2021

**ಫಿರ್ಯಾದಿಃ** ಸರಕಾರದ ಪರವಾಗಿಃ ರೇವೂರ ಪೊಲೀಸ್ ಠಾಣೆ.

**-ಃ ವಿರುದ್ದ ಃ-**

**ಆರೋಪಿತರುಃ**

1. ದೇವಿಂದ್ರ ತಂದೆ ಪರಶುರಾಮ ಬಿಲ್ಕರ,
62 ವರ್ಷ, ಉಃ ನಿವೃತ್ತ ರೇಲ್ವೇ ನೌಕರ,

2. ಆನಂದ ತಂದೆ ದೇವಿಂದ್ರ ಬಿಲ್ಕರ,
25 ವರ್ಷ, ಉಃ ಕೂಲಿ ಕೆಲಸ,

3. ನಾಗೇಶ ತಂದೆ ಭೀಮಶ್ಯಾ ಬಿಲ್ಕರ,
30 ವರ್ಷ, ಉಃ ಕೂಲಿ ಕೆಲಸ,

4. ಮಹಾದೇವ ತಂದೆ ಗುಂಡಪ್ಪ,
38 ವರ್ಷ, ಉಃ ಕೂಲಿ ಕೆಲಸ, **(Split-up)**

5. ಗುಂಡಪ್ಪ ತಂದೆ ಪರಶುರಾಮ ಬಿಲ್ಕರ,
65 ವರ್ಷ, ಉಃ ಉಃ ಕೂಲಿ ಕೆಲಸ,

6. ರಾಮು ತಂದೆ ಕಲ್ಲಪ್ಪ ಬನ್ಸೋಡಿ,
40 ವರ್ಷ, ಉಃ ಕೂಲಿ ಕೆಲಸ,

7. ಅನ್ನಪೂರ್ಣ ಗಂಡ ಆನಂದ ಬಿಲ್ಕರ,
22 ವರ್ಷ, ಉಃ ಮನೆ ಕೆಲಸ,

8. ಇಂದುಮತಿ ಗಂಡ ದೇವಿಂದ್ರ ಬಿಲ್ಕರ,
55 ವರ್ಷ, ಉಃ ಉಃ ಮನೆ ಕೆಲಸ,

9. ಶೋಭಾ ಗಂಡ ರಾಮು ಬನ್ಸೋಡಿ,
35 ವರ್ಷ, ಉಃ ಮನೆ ಕೆಲಸ,

10. ಕಾವೇರಿ ಗಂಡ ನಾಗೇಶ ಬಿಲ್ಕರ,
25 ವರ್ಷ, ಉಃ ಉಃ ಮನೆ ಕೆಲಸ,

11. ತಿಪ್ಪವ್ವ ಗಂಡ ಗುಂಡಪ್ಪ ಬಿಲ್ಕರ,
60 ವರ್ಷ, ಉಃ ಕೂಲಿ ಕೆಲಸ,

ಎಲ್ಲರ ವಾಸಃ ನಿಲೂರ ಗ್ರಾಮ, ತಾಃ ಅಫಜಲಪೂರ,
ಜಿಃ ಕಲಬುರಗಿ.

----

## ದೋ ಷಾ ರೋ ಪ ಣೆ

ನಾನು ಶ್ರೀ ಅನಿಲ ಅಮಾತೆ, ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಅಫಜಲಪೂರ, ಈ ಮೂಲಕ ಕೆಳಕಂಡಂತೆ ನಿಮ್ಮನ್ನು ಆರೋಪಕ್ಕೆ ಗುರಿಪಡಿಸುತ್ತೇನೆ.

1. ದಿನಾಂಕ 24.05.2021 ರಂದು ರಾತ್ರಿ 11-00 ಗಂಟೆ ಸುಮಾರಿಗೆ ರೇವೂರ ಪೋಲಿಸ ಠಾಣಾ ವ್ಯಾಪ್ತಿಯಲ್ಲಿ ಬರುವ ನಿಲೂರ ಗ್ರಾಮದಲ್ಲಿ ಫಿರ್ಯಾದಿ ಚಾಸಾ-1 ಶ್ರೀಮತಿ ಸುರೇಖಾ ರವರ ಮನೆಯ ಮುಂದಿನ ಸಾರ್ವಜನಿಕ ರಸ್ತೆಯ ಮೇಲೆ 1ನೇ ಆರೋಪಿತನಾದ ನೀವು ಕುಡಿದು ಬಂದು ಫಿರ್ಯಾದಿ ಚಾಸಾ-1 ಶ್ರೀಮತಿ ಸುರೇಖಾ ರವರಿಗೆ ಹೊಲಸು ಶಬ್ದಗಳಿಂದ ಬೈದು ಸಾರ್ವಜನಿಕ ಸ್ಥಳದಲ್ಲಿ ಅವಮಾನ ಪಡಿಸಿದ್ದು, ಚಾಸಾ-1 ರವರು ಸಮಾಜದ ಶಾಂತಿಯನ್ನು ಕೆಡಿಸುವಂತೆ ಚಾಸಾ-1 ರವರನ್ನು ಉದ್ರೇಕಿಸಿದ ಕಾರಣ ಆ ಮೂಲಕ ಭಾ.ದಂ.ಸಂ.ಕಲಂ.504 ಸಹವಾಚಕ ಕಲಂ.149 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

2. ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆಗ ಚಾಸಾ-4 ರಿಂದ 6 ರವರು ಬಂದು ಸದರಿ 1ನೇ ಆರೋಪಿ ದೇವಿಂದ್ರನಿಗೆ ವಿಚಾರಿಸುತ್ತಿದ್ದಾಗ, 2 ರಿಂದ 11ನೇ ಆರೋಪಿತರೆಲ್ಲರೂ ಸೇರಿ ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಫಿರ್ಯಾದಿ ಚಾಸಾ-1 ಶ್ರೀಮತಿ ಸುರೇಖಾ ರವರ ಮನೆಯ ಮುಂದಿನ ಸಾರ್ವಜನಿಕ ರಸ್ತೆಯ ಮೇಲೆ ಚಾಸಾ-1 ರವರಿಗೆ ಹೊಡೆಯುವ ಉದ್ದೇಶದಿಂದ ಬಂದಿದ್ದು, ಆ ಮೂಲಕ ನೀವು ಭಾ.ದಂ.ಸಂ.143 ಸಹವಾಚಕ ಕಲಂ 149ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

3. ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರೆಲ್ಲರೂ ಸೇರಿ ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಫಿರ್ಯಾದಿ ಚಾಸಾ-1 ಶ್ರೀಮತಿ ಸುರೇಖಾ ರವರ ಮನೆಯ ಮುಂದಿನ ಸಾರ್ವಜನಿಕ ರಸ್ತೆಯ ಮೇಲೆ ಚಾಸಾ-1 ರವರಿಗೆ ಹೊಡೆಯುವ ಉದ್ದೇಶದಿಂದ ಕೈಯಲ್ಲಿ ಬಡಿಗೆ ಮತ್ತು ಕಲ್ಲುಗಳನ್ನು ಹಿಡಿದುಕೊಂಡು ಬಂದು ದೊಂಬಿ ಎಬ್ಬಿಸಿದ್ದು, ಆ ಮೂಲಕ ನೀವು ಭಾ.ದಂ.ಸಂ.147 ಸಹವಾಚಕ ಕಲಂ 149ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

4. ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಅಕ್ರಮ ಕೂಟ ರಚಿಸಿಕೊಂಡು ಬಂದು ನಿಮ್ಮಲ್ಲಿ 7ನೇ ಆರೋಪಿತಳಾದ ನೀವು ಫಿರ್ಯಾದಿ ಚಾಸಾ-1 ಶ್ರೀಮತಿ ಸುರೇಖಾ ರವರಿಗೆ ಬಡಿಗೆಯಿಂದ ಎದೆಗೆ ಹೊಡೆದು, 8ನೇ ಆರೋಪಿತಳಾದ ನೀವು ಒಂದು ಹಿಡಿ ಗಾತ್ರದ ಕಲ್ಲಿನಿಂದ ಚಾಸಾ-1 ರವರ ಬೆನ್ನಿಗೆ ಹೊಡೆದು, ತೀವ್ರ ಸ್ವರೂಪದ ರಕ್ತಗಾಯವನ್ನುಂಟು ಮಾಡಿದ ಕಾರಣ, ಆ ಮೂಲಕ ಭಾ.ದಂ.ಸಂ.ಕಲಂ.324 ಸಹವಾಚಕ ಕಲಂ.149 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

5. ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಅಕ್ರಮ ಕೂಟ ರಚಿಸಿಕೊಂಡು ಬಂದು ನಿಮ್ಮಲ್ಲಿ 11ನೇ ಆರೋಪಿತಳಾದ ನೀವು ಫಿರ್ಯಾದಿ ಚಾಸಾ-1 ಶ್ರೀಮತಿ ಸುರೇಖಾ ರವರಿಗೆ ಕೈಯಿಂದ ಹೊಟ್ಟೆಯ ಮೇಲೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ ಕಾರಣ, ಆ ಮೂಲಕ ಭಾ.ದಂ.ಸಂ.ಕಲಂ.323 ಸಹವಾಚಕ ಕಲಂ.149 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

6. ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ಜಗಳ ಬಿಟ್ಟು ಹೋಗುವಾಗ ಫಿರ್ಯಾದಿ ಚಾಸಾ-1 ಶ್ರೀಮತಿ ಸುರೇಖಾ ರವರಿಗೆ ಮತ್ತು ಚಾಸಾ-4 ರಿಂದ 6 ರವರಿಗೆ ಜೀವ ಬೆದರಿಕೆ ಹಾಕಿದ ಕಾರಣ, ಆ ಮೂಲಕ ಭಾ.ದಂ.ಸಂ.ಕಲಂ. 506 ಸಹವಾಚಕ ಕಲಂ 149 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

## ಆರೋಪಿತರ ಹೇಳಿಕೆ

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ ಆ-1

ಆ-2

ಆ-3

ಆ-5

ಆ-6

ಆ-7

ಆ-8

ಆ-9

ಆ-10

ಆ-11

ಪ್ರಃ-2) ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತಿರೊ ಅಥವಾ ವಿಚಾರಣೆ ನಡೆಯಬೇಕಾ?

ಉಃ ಆ-1

ಆ-2

ಆ-3

ಆ-5

ಆ-6

ಆ-7

ಆ-8

ಆ-9

ಆ-10

ಆ-11

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ದಿನಾಂಕ 29.11.2025 ಪ್ರ.ದ.ನ್ಯಾ.ದಂ. ಅಫಜಲಪೂರ.